

ಚಿತ್ರ: ಡಿ.ಸಿ. ನಾಗೇಶ್

# ಫಕೀರ್ ಮುಹಮ್ಮದ್ ಕಟ್ಪಾಡಿ

ಉಡುಪಿ ಜಿಲ್ಲೆಯ ಕಟ್ಪಾಡಿಯವರಾದ ಕತೆಗಾರ ಫಕೀರ್ ಮುಹಮ್ಮದ್ ದಟ್ಟ ಮುಸ್ಲಿಂ ಜಗತ್ತನ್ನು ಕನ್ನಡದಲ್ಲಿ ಅನಾವರಣಗೊಳಿಸಿದ ಮೊದಲ ಲೇಖಕ. ಅವರು ಕತೆಗಾರ, ಕಾದಂಬರಿಕಾರ, ಅನುವಾದಕ. ಅವರ ಊರು, ಅದರ ಪರಿಸರ, ಬಾಲ್ಯದ ನೆನಪುಗಳು ಅವರ ಬರವಣಿಗೆಯ ಮೇಲೆ ಅಪಾರ ಪ್ರಭಾವ ಬೀರಿವೆ. ಮಾನವೀಯ ತುಮುಲಗಳ, ಮನುಷ್ಯ ಅಂತಃಕರಣವನ್ನು ಮುಟ್ಟುವ ಕಟ್ಪಾಡಿ ಅವರ ಕತೆಗಳು ಧರ್ಮ ಹಾಗೂ ಬದುಕಿನ ಬಲೆಯಲ್ಲಿ ಮನುಷ್ಯ ಸಿಕ್ಕು ಒದ್ದಾಡುವುದನ್ನು ಚಿತ್ರಿಸುತ್ತವೆ. 'ಗೋರಿ ಕಟ್ಟಿಕೊಂಡವರು', 'ನೋಂಬು', 'ದಜ್ಜಾಲ', 'ಅತ್ತರ್ ಹಾಜಿಕ ಮತ್ತು ಇತರ ಕತೆಗಳು', 'ಪಚ್ಚಕುದುರೆ' ಎಂಬ ಕಥಾಸಂಗ್ರಹಗಳು, 'ಕಚ್ಚಾದ', 'ಸರಕುಗಳು' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಕಟ್ಪಾಡಿಯವರ ವಿದ್ಯಾಭ್ಯಾಸ ಬಿ.ಕಾಂ ವರೆಗೆ.

'ಬೆರೂತಿನಿಂದ ಜೆರುಸಲೇಮಿಗೆ', 'ದೇಶ ವಿಭಜನೆಯ ಕತೆಗಳು', 'ಕಯ್ಯೂರಿನ ರೈತ ವೀರರು', 'ಸೂಫಿ ಸಂತರು', 'ಸೂಫಿ ಮಹಿಳೆಯರು', 'ಕೇರಳದಲ್ಲಿ ಹದಿನೈದು ದಿನಗಳು' ಅವರ ಇನ್ನಿತರ ಪುಸ್ತಕಗಳಾಗಿವೆ.

ಬ್ಯಾಂಕ್ ಅಧಿಕಾರಿಯಾಗಿ ನಿವೃತ್ತರಾಗಿರುವ ಕಟ್ಪಾಡಿಯವರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಕಳ್ಸಿದಿರಂತೆ. ಅದಕ್ಕೆ ಬಂದೆ...' ಎಂದ ವಿನೀತನಾಗಿ.

'ಹೌದು... ಬಾ ಇಲ್ಲಿ ಕೂತ್ಕೋ ನನ್ನ ಹತ್ತಿರ' ಎಂದು ಒತ್ತಾಯದಿಂದ ಕೈಹಿಡಿದು ಸೋಫಾದಲ್ಲಿ ಕುಳ್ಳಿರಿಸಿಕೊಂಡರು. ಅಬ್ದುಲ್ಲಾನಿಗೆ ಇದೆಲ್ಲಾ ಹೊಸ ಅನುಭವ.

ದೀರ್ಘವಾದ ದಮ್ಮೊಂದನ್ನು ಎಳೆದು ಹೊಗೆ ಬಿಟ್ಟು ಸಿಗರೇಟಿನ ಕೊನೆಯನ್ನು ಏಶ್‌ಟ್ರೇಯಲ್ಲಿ ಹಿಚುಕುತ್ತಾ ಅಂದರು,

'ಅಬ್ದುಲ್ಲಾ... ನಿನಗೆ ನಾನು ಇಷ್ಟರವರೆಗೆ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ನೀನು ನನಗೆ ಒಂದು ಉಪಕಾರ ಮಾಡ್ತೀಯಾ...?'

ಖಾನ್ ಸಾಹೇಬರು ಅವನ ಮುಖವನ್ನು ನೋಡುತ್ತಿರಲಿಲ್ಲ. ಸಿಗರೇಟಿನ ಕೊನೆಯನ್ನೇ ಹಿಚುಕುತ್ತಿದ್ದರು. ಅಬ್ದುಲ್ಲಾನಿಗೆ ಕಸಿವಿಸಿ... ನಡುಕ. ಏನೋ ಹೇಳಬೇಕೆಂದು ಒತ್ತರಿಸಿ ಬಂದ ಭಾವುಕತೆ. ನಾಲಗೆಗೆ ಚಲಿಸಲಾರದಂತಹ ಜಡತ್ವ, ತೊದಲಿದ.

'ಸಾಹುಕಾರ್ರ ಉಪಕಾರ... ತೀರಿಸಲಿಕ್ಕೆ ಸಾಧ್ಯವಾ...?'